**ದಿನಾಂಕ: 04-6-2011ರಂದು ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ಎನ್.ಐ.ಸಿ. ಅಧಿಕಾರಿಗಳೊಂದಿಗೆ ನಡೆದ ಸಭಾ ನಡವಳಿಗಳು:**

**ಈ ಸಭೆಯಲ್ಲಿ ಉಪಸ್ಥಿತರಿದ್ದ ಆಯುಕ್ತರುಗಳು/ಅಧಿಕಾರಿಗಳು:**

1) ಶ್ರೀ ಎ.ಕೆ.ಎಂ. ನಾಯಕ್ - ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2) ಶ್ರೀ ಡಿ. ತಂಗರಾಜ್ - ರಾಜ್ಯ ಮಾಹಿತಿ ಆಯುಕ್ತರು.
3) ಶ್ರೀ ಬಿ.ಎ. ನಾಗೇಶ್ - ಕಾರ್ಯದರ್ಶಿಗಳು.
4) ಶ್ರೀ ಟಿ. ಅಶೋಕ - ಅಧೀನ ಕಾರ್ಯದರ್ಶಿ.
5) ಶ್ರೀ ಹೆಚ್. ಅನಂತ ಕುಮಾರ್ - ಶಾಖಾಧಿಕಾರಿ.
6) ಶ್ರೀ ಕೆ. ಶ್ರೀನಿವಾಸ್ - ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
7) ಶ್ರೀ ಲಕ್ಷ್ಮೀಶ - ಪ್ರಿನ್ಸಿಪಾಲ್ ಸಿಸ್ಟಂ ಅನಾಲಿಸ್ಟ್, ಎನ್.ಐ.ಸಿ.
8) ಪ್ರತಿಭಾ ದೇಸಾಯಿ - ಸೀನಿಯರ್ ಪ್ರೋಗ್ರಾಮರ್.

ವಿಷಯ: 1. ಮಿಥಿಕ್ ಸೊಸೈಟಿಗೆ ಕೆ.ಐ.ಸಿ. ಸರ್ವರ್ಸ್ ಸಂಪರ್ಕವನ್ನು ಕಲ್ಪಿಸುವ ಬಗ್ಗೆ.

ಮಿಥಿಕ್ ಸೊಸೈಟಿಯಲ್ಲಿರುವ ಆಯೋಗದ ನ್ಯಾಯಾಂಗಣ ಮತ್ತು ಕಛೇರಿಯನ್ನು ಕೆ.ಐ.ಸಿ. ಸರ್ವರ್ಸ್‌ಗಳೊಂದಿಗೆ ಸಂಪರ್ಕ ಕಲ್ಪಿಸಲು ಸಿ.ಆ.ಸು.ಇ.ಯ ಇ-ಆಡಳಿತಕ್ಕೆ ಕೆ.ಎಸ್.ಡಬ್ಲ್ಯು.ಎ.ಎನ್. ಸಂಪರ್ಕದ ಸಾಧ್ಯತೆ ಕುರಿತು ಪತ್ರ ಬರೆಯಲು ನಿರ್ದೇಶಿಸಲಾಯಿತು.

ಎನ್.ಐ.ಸಿ. ಅಧಿಕಾರಿಯವರು ಸಭೆಯಲ್ಲಿ ಸಾಧ್ಯವಿಲ್ಲವೆಂದು ತಿಳಿಸಿದ ನಂತರ ಬಿ.ಎಸ್.ಎನ್.ಎಲ್. ಸಂಸ್ಥೆಯಿಂದ ಇಂಟರ್‌ನೆಟ್‌ನ ಸೇವೆಯ ಸಂಪರ್ಕವನ್ನು ಪಡೆಯಲು ಸುಮಾರು ರೂ. 80,000/-ಗಳನ್ನು ಪಾವತಿಸಬೇಕಾಗಬಹುದೆಂದು ಎನ್.ಐ.ಸಿ ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದು, ಒಟ್ಟಾಗಿ 6 ಮೊಡಮ್ಸ್‌ಗಳನ್ನು ಖರೀದಿಸಬೇಕಾಗಿದ್ದು, ಇದನ್ನು ಅಳವಡಿಸಿದ್ದಲ್ಲಿ ನ್ಯಾಯಾಂಗ 5, 6 ಮತ್ತು 7ರ ಆದೇಶಗಳನ್ನು ಆಯೋಗದ ಸರ್ವರ್ಸ್‌ಗಳಲ್ಲಿ ಅಳವಡಿಸಲು ಅವಕಾಶವಿರುತ್ತದೆ ಎಂದು ತಿಳಿಸಿದರು.

ಈ ನಿಟ್ಟಿನಲ್ಲಿ ಎನ್.ಐ.ಸಿ.ಯವರು ಬಿ.ಎಸ್.ಎನ್.ಎಲ್. ಸಂಸ್ಥೆಯ ಅಧಿಕಾರಿಗಳ ಸಂಪರ್ಕ ವಿವರಗಳನ್ನು ನೀಡುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ಎನ್.ಐ.ಸಿ., ಸಂಸ್ಥೆಯವರ ತಾಂತ್ರಿಕ ಸಹಾಯ ಮತ್ತು ಸಲಹೆಯನ್ನು ಪಡೆಯಲು ಆಯೋಗವು ಒಪ್ಪಿಗೆ ನೀಡಿರುತ್ತದೆ.

ವಿಷಯ: 2. ಆಗಸ್ಟ್ 2010ರ ಅಂತ್ಯದಲ್ಲಿ ಜಾರಿಗೆ ತಂದಿರುವ ಪೇಪರ್‌ಲೆಸ್ ಆಫೀಸ್(ಪಿ.ಎಲ್.ಓ. ಮಾಡ್ಯೂಲ್)ನ ಪ್ರಗತಿ ನಿಯಂತ್ರಣಕ್ಕಾಗಿ ಎಂ.ಐ.ಎಸ್.ಮಾಡ್ಯೂಲ್‌ಅನ್ನು ತಯಾರಿಸುವ ಕುರಿತು.

ಈ ವಿಷಯವನ್ನು ಚರ್ಚಿಸಲಾಗಿ ಆಯೋಗಕ್ಕೆ ಬೇಕಾಗಿರುವ ನಮೂನೆಗಳನ್ನು ಎನ್.ಐ.ಸಿ. ಸಂಸ್ಥೆಗೆ ನೀಡಲು ನಿರ್ಧರಿಸಲಾಯಿತು. ಪ್ರಕರಣಗಳ ವಿಲೇವಾರಿ, ಮಾಸಿಕ ಸಭೆಗೆ ಬೇಕಾಗಿರುವ ಅಂಕಿ ಅಂಶಗಳು ಮತ್ತು ವಾರ್ಷಿಕ ವರದಿ ತಯಾರಿಕೆ, ಇತ್ಯಾದಿಗೆ ಬೇಕಾದ ನಮೂನೆ/ಕೋಷ್ಟಕಗಳನ್ನು ಸಿದ್ಧಪಡಿಸಿ ಎನ್.ಐ.ಸಿ. ಯವರಿಗೆ ನೀಡಲು ನಿರ್ಧರಿಸಲಾಯಿತು.

ವಿಷಯ: 3. ಹಳೆ ಕಡತಗಳ ವಿಲೇವಾರಿ/ಡಿಜಿಟಲೈಜೇಶನ್ ಕುರಿತು.

ಈ ವಿಷಯವನ್ನು ಚರ್ಚಿಸಲಾಗಿ ಆಯೋಗವು ಅಸ್ಥಿತ್ವಕ್ಕೆ ಬಂದು 5 ವರ್ಷಗಳು ಮೀರಿದ್ದು, 2005ನೇ ಸಾಲಿನಿಂದಲೂ ನ್ಯಾಯಾಂಗದ ಆದೇಶಗಳು ಆಯೋಗದ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆಂದು ಎನ್.ಐ.ಸಿ.ಯವರು ತಿಳಿಸಿರುತ್ತಾರೆ. ಕಛೇರಿಯಲ್ಲಿ ಸ್ಥಳದ ಅಭಾವವಿರುವುದರಿಂದ ಹಳೆ ಕಡತಗಳ ನಾಶಕ್ಕಾಗಿ ಪ್ರಸ್ತಾವನೆಯನ್ನು ಆಯೋಗದ ಮುಂದಿಡಲಾಗಿ, ಈ ಹಳೆ ಕಡತಗಳನ್ನು ಡಿಜಿಟಲೈಜೇಶನ್ ಮಾಡಬಹುದೆಂದು ಎನ್.ಐ.ಸಿ.ಯವರು ಸೂಚಿಸಿದಾಗ ತಕ್ಕ ಪ್ರಸ್ತಾವನೆಯನ್ನು ಮಂಡಿಸಲು ನಿರ್ಧರಿಸಲಾಯಿತು.

ವಿಷಯ: 4. 2010-11ನೇ ಸಾಲಿನ ವಾರ್ಷಿಕ ವರದಿ ತಯಾರಿಕೆ ಕುರಿತು.

ಈ ವಿಷಯನ್ನು ಚರ್ಚಿಸಲಾಗಿ 2010-11ನೇ ಸಾಲಿಗೆ ಸಂಬಂಧಿಸಿದಂತೆ ಆಯೋಗದ ಅಂಕಿ ಅಂಶಗಳ ವಿವರಗಳನ್ನು ಲಭ್ಯವಿರುವವರೆಗೆ ಮಾಹಿತಿಯನ್ನು ಕ್ರೋಢೀಕರಿಸಿ ಒಂದು ವಾರದೊಳಗೆ ನೀಡಲು ಎನ್.ಐ.ಸಿ.ಯವರಿಗೆ ತಿಳಿಸಲಾಯಿತು.

ವಿಷಯ: 5. ಪ್ರೋಗ್ರಾಮರ್ ಮತ್ತು ಜೂನೀಯರ್ ಪ್ರೋಗ್ರಾಮರ್‌ಗಳ ಕಾರ್ಯ ನಿರ್ವಹಣೆ ಮತ್ತು ಜವಾಬ್ದಾರಿಗಳ ಬಗ್ಗೆ.

ಈ ವಿಷಯವನ್ನು ಚರ್ಚಿಸಲಾಗಿ ಪ್ರೋಗ್ರಾಮರ್ ಮತ್ತು ಜೂನೀಯರ್ ಪ್ರೋಗ್ರಾಮರ್‌ಗಳು ಕಾರ್ಯದರ್ಶಿಯವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಎನ್.ಐ.ಸಿ.ಯೊಂದಿಗೆ ಯಾವುದೇ ಸಭೆ ಅಥವಾ ಚರ್ಚೆಯಲ್ಲಿ ಭಾಗವಹಿಸಲು ಹೋಗಬೇಕಾಗಿ ಬಂದಾಗ ಕಾರ್ಯದರ್ಶಿಯವರ ಗಮನಕ್ಕೆ ತಂದು ಚರ್ಚೆಯ ವಿವರಗಳನ್ನು ಕಾರ್ಯದರ್ಶಿ ಮುಖಾಂತರ ಆಯೋಗದ ಗಮನಕ್ಕೆ ತರಲು ನಿರ್ಧರಿಸಲಾಯಿತು.

ಆಯೋಗದ ಪ್ರೋಗ್ರಾಮರ್‌ರವರು ಆಗಸ್ಟ್ 23ರಂದು ಪ್ರಾರಂಭಿಸಿದ ಪಿ.ಎಲ್.ಓ. ಬಳಸಿ ಮಾಸಿಕ ಸಭೆಗೆ ಬೇಕಾದ ಮಾಹಿತಿ, 7 ನ್ಯಾಯಾಲಯದ "ಆದೇಶಗಳ ಅಪ್‌ಲೋಡಿಂಗ್" ಪ್ರಗತಿಯನ್ನೊಳಗೊಂಡ ವಿವರಗಳನ್ನು ವಾರಾಂತ್ಯಕ್ಕೆ (ಪ್ರತಿ ಶನಿವಾರದಂದು) ಪಟ್ಟಿ ಮಾಡಿ ಆಯೋಗಕ್ಕೆ ಸಲ್ಲಿಸಲು ಸೂಚಿಸಲಾಯಿತು. ಕಿರಿಯ ಪ್ರೋಗ್ರಾಮರ್ ವೆಬ್‌ಸೈಟ್ ಅಪ್‌ಡೇಟಿಂಗ್ ಜೊತೆಗೆ ಆಯೋಗದಲ್ಲಿರುವ ವಿವಿಧ ಗಣಕ ಯಂತ್ರ ಮತ್ತು ವಿ.ಸಿ. ಯಂತ್ರೋಪಕರಣಗಳ ಮೇಲುಸ್ತುವಾರಿಯನ್ನು ನಿರ್ವಹಿಸಲು ನಿರ್ದೇಶಿಸಲಾಯಿತು.

ಆಯೋಗದಲ್ಲಿ ಕಾರ್ಯನಿರ್ವಹಿಸುತ್ತಿರುವ 5 ಜನ ಡೇಟಎಂಟ್ರಿ ಆಪರೇಟರ್‌ಗಳು ಪ್ರೋಗ್ರಾಮರ್‌ರವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸಬೇಕೆಂದು ನಿರ್ದೇಶಿಲಾಯಿತು.

ಶ್ರೀ ಎ.ಕೆ.ಎಂ. ನಾಯಕ್
ರಾಜ್ಯ ಮುಖ್ಯ ಮಾಹಿತಿ ಆಯುಕ್ತರು

ಶ್ರೀ ಡಿ. ತಂಗರಾಜ್
ರಾಜ್ಯ ಮಾಹಿತಿ ಆಯುಕ್ತರು